ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಪರಿಸ್ಥಿತಿ ಗಂಭೀರವಾಗಿರುವ ಬಗ್ಗೆ

ಅಲ್ಪ ಕಾಲಾವಧಿ ಪ್ರಶ್ನೆ

೧೪. **ಶ್ರೀ ಆರ್. ವೆಂಕಟರಾಮಯ್ಯ** (ಮುಳಬಾಗಿಲು).–ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಪರಿಸ್ಥಿತಿ ಗಂಭೀರವಾಗಿರುವುದರಿಂದ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ದೊರಕದೆ ಹಾಗೂ ಕೈಗಾರಿಕೋದ್ಯಮಗಳು ಸರಿಯಾಗಿ ನಡೆಯದೆ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಜೆ.ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ವಿದ್ಯುಚ್ಛಕ್ತಿಯ ಪರಿಸ್ಥಿತಿಯು ಗಂಭೀರತೆ ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಪರಿಸ್ಥಿತಿ ಗಂಭೀರವಾಗಿ ರೈತರ ಪಂಪುಸೆಟ್ಟುಗಳಿಗೆ ಪ್ರತಿದಿನ ೬ ಘಂಟೆಗಳ ಕಾಲ ಲೋಡ್ ಷೆಡಿಂಗ್ ಮಾಡುವುದು ಬಿಟ್ಟು ವಿದ್ಯುತ್ ಕಡಿತ ಮಾಡಿಲ್ಲ. ಕೈಗಾರಿಕೋದ್ಯಮಗಳಿಗೆ ಶೇಕಡ ೨೫ರಿಂದ ೭೦ರವರೆಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆ.

ಆ) ವಿದ್ಯುಚ್ಛಕ್ತಿ ಅಭಾವ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ಈ ಕೆಳಕಂಡಂತೆ ನಮೂದಿಸಿದೆ.–

೧ ನಮ್ಮ ರಾಜ್ಯಕ್ಕೆ ಕೇಂದ್ರ ಯೋಜನೆಗಳಿಂದ ಬರಬೇಕಾದ ವಿದ್ಯುಚ್ಛಕ್ತಿ ಪಾಲನ್ನು ಪಡೆಯುತ್ತಿದ್ದೇವೆ ಮತ್ತು ಇನ್ನೂ, ಅಲಾಟ್ ಮಾಡದೆ ಇರುವ ಶೇಕಡಾ ೧೫ನ್ನು ನಮ್ಮ ರಾಜ್ಯಕ್ಕೆ ಕೊಡುವಂತೆ ಕೇಳುತ್ತಿದ್ದೇವೆ.

೨ ನೆರೆ ರಾಜ್ಯಗಳಿಂದ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಅಮದು ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೩ ಪಾಸಗಿಯವರಿಗೆ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ದೀರ್ಘಾವಧಿವರೆಗೆ ಗುತ್ತಿಗೆಗೆ ಕೊಡುತ್ತಿದ್ದೇವೆ.

೪ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಡೀಸಲ್ ಜನರೇಟರ್ ಮೇಲೆ ಕಟ್ಟುವ ವಾಣಿಜ್ಯ ತೆರಿಗೆಯನ್ನು ಮನ್ನಾ ಮಾಡಲಾಗಿದೆ.

೫ ವಿದ್ಯುತ್ ಉತ್ಪಾದನೆಗೆ ಉಪಯೋಗಿಸುವ ಡೀಸಲ್ ಎಣ್ಣೆಯ ಮೇಲೆ ಮಾರಾಟ ತೆರಿಗೆ ಮನ್ನಾ.

೬ ವಿದ್ಯುತ್ ಸಾಗಣೆ ಮತ್ತು ಹಂಚಿಕೆಯಲ್ಲಿನ ನಷ್ಟವನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳು.

೭ ರಾಯಚೂರು ಶಾಖೋತ್ಪನ್ನ ಕೇಂದ್ರ ಮತ್ತು ಇತರ ವಿದ್ಯುತ್ ಯೋಜನೆಗಳ ಕೆಲಸಗಳ ನಿರ್ವಣೆಯನ್ನು ವೇಗಗೊಳಿಸುವುದು.

೮ ಶರಾವತಿ ಟೇಲ್ ರೇಸ್ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಕೋರಲಾಗಿದೆ.

೯ ವಿದ್ಯುತ್ ಪೂರೈಕೆಯನ್ನು ಹೆಚ್ಚಿಸುವ ಸಲುವಾಗಿ ೫೫ ಮೆ.ವ್ಯಾ. ಸಾಮರ್ಥ್ಯದ ೪ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

೧೦ ೧೨೦ ಮೆ.ವ್ಯಾ. ಸಾಮರ್ಥ್ಯದ ಡೀಸಲ್ ಸ್ಥಾವರ ವಿದ್ಯುತ್ ಉತ್ಪಾದನಾ ಘಟಕವನ್ನು ಬೆಂಗಳೂರಿನ ಹತ್ತಿರ ಸ್ಥಾಪಿಸಲು ಯೋಜಿಸಲಾಗಿದೆ.

೧೧ ಮಂಗಳೂರಿನಲ್ಲಿ ವಿವಿಧ ಇಂಧನಗಳ ಶಾಖೋತ್ಪನ್ನ ಕೇಂದವನ್ನು ಸ್ಥಾಪಿಸಲು ಪ್ರಯತ್ನ ಗಳನ್ನು ಮಾಡಲಾಗಿತ್ತಿದೆ.

೧೨ ಮೇಲ್ಕಂಡ ಯೋಜನೆಗಳಲ್ಲದೆ ಕೇಂದ್ರ ಸರ್ಕಾರ ಆಣು ವಿದ್ಯುತ್ ಉತಾ ದನಾ ಕೇಂದ್ರ ವನ್ನು (ಮೊದಲ ಹಂತ ೨ ೨೩೫ ಮೇಗಾವ್ಯಾಟ್) ಉತ್ತರ ಕನ್ನಡ ಜಿಲ್ಲೆಯ ಕೈಗಾ ಎಂಬ ಪ್ರದೇಶದಲ್ಲಿ ಸ್ಥಾಪಿಸಲು ಕಾರ್ಯಾಕ್ರಮ ಪ್ರಾರಂಭಮಾಡಲಾಗಿದೆ.

ಅಲ್ಪ ಕಾಲಾವಧಿ ಪ್ರಶ್ನೆ ೮ (೧೪)

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ಅಭಾವದಿಂದ ವ್ಯವಸಾಯೋತ್ಪನ್ನ ಗಳಿಗೆ ಆದರಲ್ಲೂ ಪಂಪುಸೆಟ್ಟುಗಳಿಗೆ ಇವರು ಕನೆಕ್ಷನ್ ಕೊಡುತ್ತಿಲ್ಲ. ಹೊಸ ಉದ್ದಿಮೆಗಳಿಗೆ ವಿದ್ಯುತ್ ಒದಗಿಸದೆ ತಮಿಳ್ನಾಡು, ಆಂಧ್ರಕ್ಕೆ ಎಲ್ಲಾ ಉದ್ದಿಮೆಗಳು ಓಡುತ್ತಿವೆ. ೭೦ ಪರ್ಸೆಂಟ್ ವಿದ್ಯುತ್ತನ್ನು ಕಟ್ ಮಾಡಿದ್ದೀರಿ. ತಪ್ಪು ಉತ್ತರದಲ್ಲಿ ನೋಡಿದರೆ ಶರಾವತಿ ಯೋಜನೆಗೆ ಅನುಮತಿ ಕೋರಲಾಗಿದೆ ಎಂದು ಹೇಳಿದ್ದೀರಿ. ಇನ್ನೊಂದು ವಿದ್ಯುತ್ ಘಟಕವನ್ನು ಬೆಂಗಳೂರಿನ ಹತ್ತಿರ ಸ್ಥಾಪಿಸಲು ಉದ್ದೇಶಿ ಸಲಾಗಿದೆ ಎಂದು ಹೇಳಿದ್ದೀರಿ. ಈ ರೀತಿ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ಹಾಕಿಕೊಂಡಿರುವ ಯೋಜನೆಯನ್ನು ಯಾವಾಗ ಪೂರೈಸು ತ್ತೀರಿ ? ವಿದ್ಯುಚ್ಛಕ್ತಿ ಅವಶ್ಯಕ ವಸ್ತು ಆಲ್ಲವೆ ? ವಿದ್ಯುಚ್ಛಕ್ತಿ ಇಲ್ಲದೆ ಕರ್ನಾಟಕ ಅಭಿವೃದ್ಧಿ ಆಗು ವುದಕ್ಕೆ ಸಾಧ್ಯವೆ ?

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ದಿಂದ ಅನುಮತಿ ಪಡೆಯಬೇಕಾಗಿದೆ. ಅವರು ಅನುಮತಿ ಕೊಟ್ಟಮೇಲೆ ತೀವ್ರವಾಗಿ ಪ್ರಾರಂಭಿ ಸುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.—೭೦ ಪರ್ಸೆಂಟ್ ವಿದ್ಯುತ್ ಕಟ್ ಮಾಡಿರುವುದರಿಂದ ಎಲ್ಲಾ ಕೈಗಾರಿಕೆಗಳು ಇಲ್ಲಿಂದ ಓಡಿಹೋಗುತ್ತಿವೆ. ಹಿಂದೂಪುರ ಎಂಬ ಟೌನ್ ಇದೆ. ಅಲ್ಲಿ ಉದ್ದಿಮೆಗಳು ಪ್ರಾರಂಭವಾಗುತ್ತಿವೆ, ಹೊಸೂರಿಗೆ ಕೆಲವು ಹೋಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ತಾವು ಯೋಚಿಸು ತ್ತೀರಾ ? ಬರೀ ಮಾಡಿಕೊಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನ್ಯಾಯವೆ ? ಯಾವಾಗ ಈ ಪರಿಸ್ಥಿತಿಯನ್ನು ಸರಿಪಡಿಸುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ವಿದ್ಯುಚ್ಛಕ್ತಿ ವಿಚಾರ ಅನೇಕ ಸಲ ಈ ಸಭೆಯಲ್ಲಿ ಚರ್ಚೆಗೆ ಬಂದಿದೆ. ಈಗಾಗಲೇ ರಾಜ್ಯ ಸರ್ಕಾರ ಹೆಚ್ಚು ವಿದ್ಯುತ್ ಪಡೆಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಗ್ಯಾಸ್ ಟರ್ಬೈನ್ ಹಾಕುವುದಕ್ಕೆ ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಅನುಮತಿ ಬರಬೇಕಾಗಿದೆ ಆದಷ್ಟು ಜಾಗ್ರತೆ ಅನುಮತಿ ಪಡೆದು ಪ್ರಾರಂಭಿಸುತ್ತೇವೆಂದು ವಿದ್ಯುತ್ ಮಂತ್ರಿಗಳು ಹೇಳಿದ್ದಾರೆ. ಬೇರೆ ರಾಜ್ಯದಿಂದ ಬರತಕ್ಕ ವಿದ್ಯುತ್ತನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕಾಳಿ ಯೋಜನೆಯನ್ನು ಆದಷ್ಟು ಜಾಗ್ರತೆ ಮುಕ್ತಾಯ ಮಾಡಿ ವಿದ್ಯುತ್ ಒದಗಿಸುತ್ತೇವೆ. ರಾಯಚೂರಿನಲ್ಲಿ ಪ್ರಯತ್ನ ಮಾಡು ತ್ತಿದ್ದೇವೆ.

ಶ್ರೀ ಆರ್ ವೆಂಕಟರಾಮಯ್ಯ.—ರಾಮಗುಂಡಂನಿಂದ ನಮಗೆ ಬರಬೇಕಾದ ಪಾಲನ್ನು ತೆಗೆದು ಕೊಂಡಿಲ್ಲ. ರಾಯಚೂರಿನದನ್ನು ಬೇಗ ಮಾಡಿಸಬೇಕು. ಶರಾವತಿ ಯೋಜನೆಯನ್ನು ಏತಕ್ಕೆ ತೆಗೆದುಕೊಂಡಿಲ್ಲ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಹೇಗಾದರೂಮಾಡಿ ಇಷ್ಟೋ ಇಷ್ಟೋ ಕೊಡುತ್ತಿದ್ದೇವೆ. ನಮ್ಮ ಪಾಲನ್ನು ಪಡೆಯುವುದಕ್ಕೆ ಕೇಂದ್ರದೊಡನೆ ಮಾತುಕತೆ ಆಗಿದೆ.